# ಸ್ಮರಣೆಯೊಂದೇ ಸಾಲದು ಈ ನಾದೋಪಾಸಕನಿಗೆ..!



ಪಿಟೀಲು ನಾದದ ಮೂಲಕ ಕೇಳುಗರನ್ನು ರೋಮಾಂಚನಗೊಳಿಸುತ್ತಿದ್ದವರು ನಾದೋಪಾಸಕ ವಿದ್ವಾನ್ ಟಿ.ಎಸ್. ತಾತಾಚಾರ್. ಈ ಘನ ವಿದ್ವಾಂಸರ ಜನ್ಮಶತಮಾನೋತ್ಸವ ಆಚರಣೆ ಈ ವರ್ಷ ನಡೆಯುತ್ತಿದ್ದು, ಜಗದ್ವಿಖ್ಯಾತ ಕಲಾವಿದನಿಗೆ ನಾದನಮನ ಸಲ್ಲಿಸುವುದು ಅವರಿಗೆ ಸಲ್ಲಿಸುವ ನಿಜವಾದ ಗೌರವ. ಜತೆಗೆ ಅವರ ಸಂಗೀತ ಶಿಸ್ತು, ಆದರ್ಶಗಳನ್ನು ಸದಾ ಪಾಲಿಸಬೇಕಾದುದು ಎಲ್ಲರ ಕರ್ತವ್ಯ ಕೂಡ.

■ ಉಮಾ ಅನಂತ್

ತಂತಿ ವಾದ್ಯ ಪಿಟೀಲಿನಲ್ಲಿ ಮಧುರಾತಿ ಮಧುರ ರಾಗಗಳನ್ನು ನುಡಿಸಿ, ಮೀಟಿನ ಎಳೆ ಎಳೆಯಲ್ಲೂ ನಾದದ ಕಂಪನ್ನು ಹರಡುತ್ತಾ ನಾಡಿನಾದ್ಯಂತ ನಾದದ ಹೊಳೆಯನ್ನು ಹರಿಸಿದವರು ವಿದ್ವಾನ್ ಟಿ.ಎಸ್. ತಾತಾಚಾರ್. ಮೂವತ್ತು–ನಲವತ್ತರ ದಶಕದಲ್ಲಿ ಪಿಟೀಲು ವಾದನದ 'ಗಟ್ಟಿ ಕುಳ' ಎನಿಸಿದ್ದ ತಾತಾಚಾರ್ ಅವರ ಜನ್ಮಶತಮಾನೋತ್ಸವವನ್ನು ಈ ವರ್ಷ ಆಚರಿಸಲಾಗುತ್ತಿದೆ.

ಆಗಿನ ಕಾಲದ ಘಟಾನುಘಟಿ ಕಲಾವಿದರಿಗೆ ಪಿಟೀಲು ಪಕ್ಕವಾದ್ಯ, ತನಿ ಕಛೇರಿ ನೀಡುವ ಮೂಲಕ ಆ ನಾದ ಮಾಧುರ್ಯದ ಸೊಬಗನ್ನು ಜಗತ್ತಿನಾದ್ಯಂತ ಪಸರಿಸಿದ ಕೀರ್ತಿ ಈ ಮಹಾನ್ ಕಲಾವಿದರಿಗೆ ಸಲ್ಲಬೇಕು. ನಾದಾನುಭವದ ಮೂಲಕ ಕೇಳುಗರಲ್ಲಿ ಸಂಗೀತದ ರುಚಿವರ್ಧನೆ ಮೂಡಿಸುತ್ತಿದ್ದ ಈ ವಿದ್ವಾಂಸರ ಜೀವನವೇ ಸಂಗೀತ, ಬದುಕಿನುದ್ದಕ್ಕೂ ತುಂಬಿದ್ದು ಸಪ್ತಸ್ವರಗಳ ನಿನಾದವೇ. ಟಿ.ಎಸ್. ತಾತಾಚಾರ್ ನಾದಲೋಕದ ಅದ್ಭುತ ಪ್ರತಿಭೆ. ಒಂದು ರೀತಿಯಲ್ಲಿ ಸಂಗೀತ ಜಗತ್ತಿನ ಧ್ರುವತಾರೆ ಎಂದೇ ಹೇಳಬಹುದು.

## ಪಿಟೀಲಿನಲ್ಲಿ ನಾದದ ಹೊಳೆ

ಮೈಸೂರು ಅರಮನೆಯಲ್ಲಿ ಶಾಸ್ತ್ರೀಯ ಸಂಗೀತ ಕಛೇರಿಗಳು ಉತ್ತುಂಗದ ಘಟ್ಟದಲ್ಲಿದ್ದ ಕಾಲ. ಸುಮಾರು ಮೂವತ್ತರ ದಶಕ. ಅರಮನೆಯಲ್ಲಿ ನಡೆಯುತ್ತಿದ್ದ ವೈವಿಧ್ಯಮಯ ಸಂಗೀತ ಕಛೇರಿಗಳು ಜಗತ್ಪ್ರಸಿದ್ಧವಾಗಿದ್ದವೂ ಆಗಿದ್ದವು. ಸಂಗೀತ ದಿಗ್ಗಜರಾದ ಮೈಸೂರು ವಾಸುದೇವಾಚಾರ್, ಕೊಳಲು ವಾದಕ ಟಿ.ಆರ್. ಮಹಾಲಿಂಗಂ, ಮಧುರೈಮಣಿ, ಪಲ್ಲಡಂ ಸಂಜೀವರಾವ್, ಶರಭಶಾಸ್ತ್ರಿಗಳು, ಟೈಗರ್ ವರದಾಚಾರ್ಯರು, ಅರಿಯಾಕುಡಿ ರಾಮಾನುಜ ಅಯ್ಯಂಗಾರ್, ಜಿ.ಎನ್. ಬಾಲಸುಬ್ರಹ್ಮಣ್ಯಂ, ಮುಸುರಿ ಸುಬ್ರಹ್ಮಣ್ಯ ಅಯ್ಯರ್, ಮಧುರೆ ಮಣಿ ಅಯ್ಯರ್, ಚಿತ್ತೂರು ಸುಬ್ರಹ್ಮಣ್ಯಪಿಳ್ಳೈ, ಮಹಾರಾಜಪುರಂ ವಿಶ್ವನಾಥ ಅಯ್ಯರ್, ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್, ಆಲತ್ತೂರು ಸಹೋದರರು, ದ್ವಾರಂ ವೆಂಕಟಸ್ವಾಮಿನಾಯ್ಡು ಮುಂತಾದ ಸಂಗೀತಗಾರರು ನಡೆಸುತ್ತಿದ್ದ ನಾದ ವೈಭವ ಅರಮನೆಯ ದಶದಿಕ್ಕುಗಳಲ್ಲೂ ಮಾರ್ದನಿಸುತ್ತಿದ್ದವು. ಇವರೆಲ್ಲ ಪೋಣಿಸುತ್ತಿದ್ದ ಸ್ವರಮಾಲೆ ಕೇಳುಗರ ಹೃದಯ ತಟ್ಟುತ್ತಿತ್ತು. ಈ ಎಲ್ಲ ಸಂಗೀತ ಸಾರ್ವಭೌಮರಿಗೆ ಪಿಟೀಲು ಪಕ್ಕವಾದ್ಯ ನುಡಿಸಿ ಇಷ್ಟೂ ಕಲಾವಿದರಿಂದ ಶಹಬ್ಬಾಸ್‌ಗಿರಿ ಗಿಟ್ಟಿಸಿಕೊಂಡವರು ವಿದ್ವಾನ್ ಟಿ.ಎಸ್. ತಾತಾಚಾರ್ .

ಪಿಟೀಲು ಪಕ್ಕವಾದ್ಯದ ಜತೆಗೆ ಜುಗಲ್‌ಬಂದಿಯನ್ನೂ ನುಡಿಸುತ್ತಿದ್ದ ಈ ಘನ ವಿದ್ವಾಂಸರು ದ್ವಾರಂ ವೆಂಕಟಸ್ವಾಮಿ ನಾಯ್ಡು, ಮಾಯಾವರಂ ಗೋವಿಂದರಾಜಪಿಳ್ಳೆ, ವೆಂಕಟರಾಮಾಶಾಸ್ತ್ರಿ ಮುಂತಾದ ಪಂಡಿತರೊಂದಿಗೆ ದ್ವಂದ್ವ ಪಿಟೀಲು ಕಛೇರಿ ನಡೆಸಿ ಎಲ್ಲ ಕಛೇರಿಗಳನ್ನು ಕೇಳುಗರ ಮನದಾಳಕ್ಕೆ ಕೊಂಡೊಗಿ ಅವಿಸ್ಮರಣೀಯ ಅನುಭವ ನೀಡುತ್ತಿದ್ದವರು. ಅಲ್ಲಿ ಆಗ ಅದ್ಭುತ ರಸಪಾಕ ಸೃಷ್ಟಿಯಾಗುತ್ತಿತ್ತು.

ಹಾಗೆ ನೋಡಿದರೆ ಟಿ.ಎಸ್. ತಾತಾಚಾರ್ ಅವರ ಬದುಕೇ ಸಂಗೀತ. ಶಾಸ್ತ್ರೀಯ ಸಂಗೀತದಲ್ಲಿ ರಾಗ, ತಾಳ, ಭಾವ, ಲಯ, ಸ್ಥಾಯಿ, ಗತಿ ಶುದ್ಧಿ, ಸಾಹಿತ್ಯದಲ್ಲಿ ಸ್ಪಷ್ಟತೆ ವಿದ್ವಾನ್ ತಾತಾಚಾರ್ ಅವರ ನುಡಿಸಾಣಿಕೆಯ ವೈಶಿಷ್ಟ್ಯವಾಗಿತ್ತು. ಇವರ ಸಂಗೀತ ಸುಮಾರು ಐದು ದಶಕಗಳ ಕಾಲ ನಿರಂತರವಾಗಿ ಕೇಳುಗರ ಮನ ತಣಿಸಿತು. ತಾತಾಚಾರ್ ಮನೆ ಮಾತಾಗಿದ್ದರು. ಖ್ಯಾತಿಯ ಉತ್ತುಂಗಕ್ಕೇರಿದ್ದರೂ ಪ್ರಚಾರ ಬಯಸದೆ ಸಂಗೀತದ ಸಮರ್ಪಣ ಭಾವ ಈ ವಿದ್ವಾಂಸರಲ್ಲಿತ್ತು ಎಂಬುದನ್ನು ಈಗಲೂ ಹಿರಿಯ ಸಂಗೀತ ವಿದ್ವಾಂಸರು ಸ್ಮರಿಸುತ್ತಾರೆ.

## ಸಂಗೀತ ಮನೆತನ

ತುಮಕೂರು ಜಿಲ್ಲೆಯ ಪಾವಗಡದಲ್ಲಿ 1917ರ ಮೇ 21ರಂದು ಜನಿಸಿದ ತಾತಾಚಾರ್ ಗುರು ಪರಂಪರೆಗೆ ಸೇರಿದವರು. ತಂದೆ ಟಿ. ಶ್ರೀನಿವಾಸಾಚಾರ್ ಹಾಗೂ ತಾಯಿ ವಕುಳಮ್ಮನವರು. ತಾತಾಚಾರ್ಯರ ತಂದೆ, ಚಿಕ್ಕಪ್ಪ ಹಾಗೂ ಮನೆತನದ ಹಿರಿಯರೆಲ್ಲಾ ವೈದಿಕರಾಗಿದ್ದರು ಜತೆಗೆ ಪಿಟೀಲು ವಿದ್ವಾಂಸರಾಗಿದ್ದವರು. ತಂದೆ ಶ್ರೀನಿವಾಸಾಚಾರ್ಯರು ಕೂಡ ಸಂಗೀತ ದಿಗ್ಗಜರಿಗೆ ಪಿಟೀಲು ಪಕ್ಕವಾದ್ಯ ನುಡಿಸಿ ಪ್ರಖ್ಯಾತರಾಗಿದ್ದವರು. ಮನೆಯಲ್ಲಿ ಯಾವಾಗಲೂ ಸಂಗೀತ ವಾತಾವರಣ, ರಾಮಾಯಣ, ಭಾಗವತ ಸಪ್ತಾಹಗಳು, ರಾಮಪಟ್ಟಾಭಿಷೇಕ ಉತ್ಸವಗಳು ನಡೆಯುತ್ತಿದ್ದವು. ಇಂಥ ಉಚ್ಚ ಸಂಸ್ಕೃತಿಯ ವಾತಾವರಣದಲ್ಲಿ ಬೆಳೆದ ತಾತಾಚಾರ್, ಮುಂದೆ ಬಹುಬೇಗ ಖ್ಯಾತಿ ಗಳಿಸಲು ಸಾಧ್ಯವಾಯಿತು. ಪಿಟೀಲಿನ ಜತೆಗೆ ಹಾರ್ಮೋನಿಯಂ ಕೂಡ ನುಡಿಸುತ್ತಿದ್ದರು. ಬೆಂಗಳೂರಿನ ಕೋಟೆ ಹೈಸ್ಕೂಲಿನಲ್ಲಿ ಹೈಸ್ಕೂಲ್ ಓದಿದ್ದ ಇವರಿಗೆ ಆಗಲೇ ಸಂಗೀತ ಕಛೇರಿ ನೀಡುವ ಅವಕಾಶವೂ ಸಿಕ್ಕಿತ್ತು. ಅದೇ ಸಮಯದಲ್ಲಿ ವಿದ್ವಾಂಸರಾದ ವೀಣಾ ಕೃಷ್ಣಮಾಚಾರ್ಯರಲ್ಲಿ ಕೆಲವು ವರ್ಣ, ಕೀರ್ತನೆಗಳನ್ನು ಹಾಡುವುದು ಅಭ್ಯಾಸ ಮಾಡಿದ್ದರು. ತಂದೆಯನ್ನು ಕಳೆದುಕೊಂಡ ಬಳಿಕ ತಮ್ಮ ದೊಡ್ಡಪ್ಪನವರ ಸಲಹೆಯಂತೆ ಮೈಸೂರಿಗೆ ಹೋಗಿ ವಿದ್ವಾನ್ ರಾಳ್ಳಪಲ್ಲಿ ಅನಂತಕೃಷ್ಣಶರ್ಮರಲ್ಲಿ ಹೆಚ್ಚಿನ ಸಂಗೀತ ಶಿಕ್ಷಣ ಪಡೆದರು. ರಾಳ್ಳಪಲ್ಲಿಯವರ

ಪಿಟೀಲು ವಿದ್ವಾಂಸ ಟಿ.ಎಸ್. ತಾತಾಚಾರ್ ಜನ್ಮಶತಮಾನೋತ್ಸವ

